(ಇಂದು ದಿನಾಂಕಃ 24-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್.ಎಸ್.ಎ ವಕೀಲರಿಂದ (ಅರ್ಜಿದಾರರ ಪರ)</u>**

- ಅಂಗನ್ಯೂನತೆ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-8 ಎಂದು, ಗುರುತಿಸಲಾಯಿತು.
- ಎಕ್ಸರೆ ಮತ್ತು ಎಕ್ಸರೆ ವರದಿಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-9 ಮತ್ತು ನಿ.ಪಿ-10 ಎಂದು, ಗುರುತಿಸಲಾಯಿತು.

ಅದರಂತೆ ನನ್ನ ಅರ್ಜಿಯಲ್ಲಿ ಕೋರಿರುವಂತೆ ಅವಾರ್ಡ ಮಾಡಲು ವಿನಂತಿಸಿಕೊಳ್ಳುತ್ತೇನೆ.

**<u>ಮುಂದುವರೆದ ಪಾಟೀ ಸವಾಲು ಶ್ರೀ ವಿ.ವಿ.ಸಿ ಪ್ರತಿವಾದಿ ಪರ ವಕೀಲರಿಂದಃ</u>**

ಅಪಘಾತ ಆಗಿ 3 ವರ್ಷ ಆಗಿದೆ. ನಿ.ಪಿ-8 ನ್ನು ಕಲ್ಬುರ್ಗಿಯ ಕೋಟಾರಿ ಆಸ್ಪತ್ರೆ ಇರುತ್ತದೆ. ಅಪಘಾತ ಆಗಿ 3 ವರ್ಷ ನಂತರ ನಿ.ಪಿ-8 ನ್ನು ಪಡೆದಿರುತ್ತೇನೆ ಎಂದರೆ ಸರಿ. ನಿ.ಪಿ-8 ನ್ನು ಕೇವಲ ಎಕ್ಸರೆಯನ್ನು ನೋಡಿ ಕೊಟ್ಟಿರುತ್ತಾರೆ. ಈಗ ನಿ.ಪಿ-8 ನ್ನು ಮಾಡಿಸುವಾಗ ಸೀಟಿ ಸ್ಕ್ಯಾನ ಮಾಡಿಸಿರುವುದಿಲ್ಲ. ನಾನು ಸಲ್ಲಿಸಿರುವ ಹೈದರಾಬಾದ ಆಸ್ಪತ್ರೆಯ ದಾಖಲೆಯಲ್ಲಿ ನನಗೆ ತಲೆಯಲ್ಲಿ ಎಲುಬು ಇಲ್ಲ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ನಿ.ಪಿ-8 ರಲ್ಲಿ ದಿಃ03-10-2022 ರಿಂದ 12-10-2022 ರ ವರೆಗೆ ಅಸ್ತಮಾ ರೋಗಕ್ಕೆ ಚಿಕಿತ್ಸೆ ಕೊಟರುವ ಬಗ್ಗೆ ಬರೆದಿದೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ನಿ.ಪಿ-8 ನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.